ಆಡಳಿತ ಮಂಡಳಿ ಚುನಾವಣೆಯಲ್ಲಿ ಭಾಗವಹಿಸುವುದು

518 (359) ಶ್ರೀ ಕೆ.ಜಿ.ಕುಮಾರಸ್ವಾಮಿ (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಘಗಳ ನೋಂದಣಿ ಕಾಯಿದೆ (Registration of Socities Act) ಪ್ರಕಾರ ಸಂಬಂಧಿಸಿದ ನೋಂದಾಯಿತ ಸಂಘ/ಸಂಸ್ಥೆಗೆ ಯಾವುದೇ ರೀತಿ ಸದಸ್ಯತ್ವ ಶುಲ್ಕ ಚಂದಾ, ಷೇರುಧನ ಪಾವತಿಸದೇ ಇರುವ ಸಹಸದಸ್ಯರಿಗೆ ಆಡಳಿತ ಮಂಡಳಿಯ ಪದಾಧಿಕಾರಿಗಳ ಹುದ್ದೆಗೆ ಸ್ಪರ್ಧಿಸುವ ಅವಕಾಶವಿದೆಯೇ;

ಆ) ಇದ್ದಲ್ಲಿ, ಇಲಾಖೆಯಿಂದ ಸುತ್ತೋಲೆ ಹೊರಡಿಸಲಾಗಿದೆಯೇ; ವಿವರ ನೀಡುವುದು;

ಇ) ಇಂತಹ ಸಹಸದಸ್ಯರು (Co-opted member) ಸಂಘದ ಮಹಾಧಿವೇಶನದ ಸಭೆಗೆ (General Body Meeting) ಆಹ್ವಾನಿಸಿದ ಅಥವಾ ಭಾಗವಹಿಸಿದ ಮಾತ್ರಕ್ಕೆ ಸಂಬಂಧಿಸಿದ ಸಂಘದ ಆಡಳಿತ ಮಂಡಳಿಯ ಪದಾಧಿಕಾರಿಗಳ ಚುನಾವಣೆಗೆ ಮತದಾನ ಮಾಡಲು ಅವಕಾಶವಿದೆಯೇ;

ಈ) ನಾಮಕರಣ/ನಾಮನಿರ್ದೇಶನ/ಸರ್ಕಾರದಿಂದ ನಾಮಕರಣ ಹೊಂದಿದ ಸದಸ್ಯರಿಗೆ ಪಂಚಾಯತ್ ರಾಜ್ಯ ಸಂಸ್ಥೆಗಳ ಅಧ್ಯಕ್ಷರ ಚುನಾವಣೆಗಳಲ್ಲಿ ಭಾಗವಹಿಸಲು ಅವಕಾಶವೇ ಇಲ್ಲ; ಇದೇ ಮಾನದಂಡವು ಈ ಕಾಯಿದೆಗೂ ಅನ್ವಯವಾಗುವುದೇ ವಿವರ ನೀಡುವುದು?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು) :

ಅ) ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಅವಕಾಶವಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.